UASB Library
Newspaper Clippings
WEDNESDAY 05.04.2023 Pg .1
Jai Kisan

ಅಳಿವಿನಂಚಿನ ಸಂಕುಲಕ್ಕೆ ಮತ್ತೊಂದು ಸೇರ್ಪಡೆ | ರಣಹದ್ದು ಧಾಮದಲ್ಲಿ ಸಂತತಿ ವೃದ್ಧಿ

ಉದ್ದ ಕೊಕ್ಕಿನ ರಣಹದ್ದು ಜೋಡಿಗೆ ಮರಿ ಜನನ

■ ಗಂಗಾಧರ್ ಬೈರಾಪಟ್ಟಣ ರಾಮನಗರ

ಅಳಿವಿನಂಚಿನಲ್ಲಿರುವ ಉದ್ದ ಕೊಕ್ಕಿನ ಮತ್ತೊಂದು ರಣಹದ್ದು ಜೋಡಿ ಮರಿಯೊಂದಕ್ಕೆ ಜನ್ಮ ನೀಡಿರುವುದು ಪಕ್ಷಿಪ್ರಿಯರಲ್ಲಿ ಸಂತಸ ಮೂಡಿಸಿದೆ.

ನಗರದ ಹೊರವಲಯದ ರಾಮದೇವರ ಬೆಟ್ಟದ ರಣಹದ್ದು ವನ್ಯಧಾಮದಲ್ಲಿ ಉದ್ದ ಕೊಕ್ಕಿನ ರಣಹದ್ದು ಜೋಡಿ ಕಳೆದ ವರ್ಷ ಒಂದು ಮರಿಗೆ ಜನ್ಮ ನೀಡಿತ್ತು. 20 ದಿನಗಳ ಹಿಂದೆ ಮತ್ತೊಂದು ಮರಿಗೆ ಜನ್ಮ ನೀಡಿದ್ದು, ಸುರಕ್ಷಿತವಾಗಿದೆ. ಅಳಿವಿನಂಚಿನಲ್ಲಿರುವ ಉದ್ದ ಕೊಕ್ಕಿನ ರಣಹದ್ದು ಸಂಕುಲದಲ್ಲಿ ಕಳೆದ ಎರಡು ವರ್ಷಗಳಲ್ಲಿ ಎರಡನೇ ಮರಿ ಜನಿಸಿರುವುದು ಹೊಸ ಭರವಸೆ ಹುಟ್ಟುಹಾಕಿದೆ.

» ಪಕ್ಷಿಪ್ರಿಯರಲ್ಲಿ ಸಂತಸ

ವರ್ಷಕ್ಕೆ ಒಂದೇ ಮೊಟ್ಟೆ: ರಣಹದ್ದುಗಳು ವರ್ಷಕ್ಕೆ ಒಂದೇ ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಸಾಮಾನ್ಯವಾಗಿ ನವೆಂಬರ್ ನಿಂದ ಮಾರ್ಚ್ ಅಂತ್ಯದವರೆಗೆ ಮೊಟ್ಟೆ ಇಟ್ಟು ಮರಿ ಮಾಡುವ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ. ಮೊಟ್ಟೆಯಿಟ್ಟ 55-60 ದಿನಗಳಿಗೆ ಮೊಟ್ಟೆಯೊಡೆದು ಮರಿ ಆಚೆ ಬರುತ್ತದೆ. ಇದೀಗ ರಾಮದೇವರ ಬೆಟ್ಟದಲ್ಲಿ ಜೋಡಿ ರಣಹದ್ದು ಮರಿಗೆ ಜನ್ಮ ನೀಡಿದ್ದು, ಸುರಕ್ಷಿತವಾಗಿದೆ. ಪರಿಸರಸ್ನೇಹಿಯಾದ ಉದ್ದ ಕೊಕ್ಕಿನ ರಣಹದ್ದು ಸಂತತಿಯೂ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಾ ಬಂದಿದ್ದು, ಸಾವಿರ ಸಂಖ್ಯೆಯಲ್ಲಿದ್ದ ಇವುಗಳ ಸಂಖ್ಯೆ ಕೇವಲ ಬೆರಳೆಣಿಕೆಯಷ್ಟು ಆಗಿದ್ದು, ಇದೀಗ ಸತತ ಎರಡನೇ ವರ್ಷದಲ್ಲಿ ಮತ್ತೊಂದು ಮರಿ ಜನ್ಮ ಪಡೆದಿದೆ.


ವಿಜಯವಾಣಿ ಚಿತ್ರ

ರಾಮದೇವರ ಬೆಟ್ಟದಲ್ಲಿ ಮರಿಯೊಂದಿಗೆ ರಣಹದ್ದು.

ಅಪರೂಪದ ಘಟನೆ: ರಣಹದ್ದು ಮರಿ ಮಾಡುವುದು ಅಪರೂಪ ಎನ್ನುವಂತೆ ಆಗಿದೆ. ರಾಮದೇವರ ಬೆಟ್ಟದಲ್ಲಿ ಈ ಹಿಂದೆ ಸಾವಿರಾರು ಸಂಖ್ಯೆಯಲ್ಲಿ ರಣಹದ್ದುಗಳು ಇದ್ದವು ಎನ್ನುವುದು ಹಿರಿಯರ ಮಾತು. ಕಾಲ ಕಳೆದಂತೆ ಇವುಗಳ ಸಂತತಿ ಕ್ಷೀಣಿಸಿತ್ತು. ಇತ್ತೀಚಿನ ವರ್ಷಗಳಲ್ಲಿ ಮೊಟ್ಟೆಯಿಟ್ಟು ಮರಿ ಮಾಡುವ ಪ್ರಕ್ರಿಯೆಯೂ ಅಪರೂಪ ಎನ್ನುವಂತಾಗಿತ್ತು. 2015-16ರಲ್ಲಿ ಜೋಡಿಯೊಂದು ಮರಿ ಮಾಡಿತ್ತು ಎನ್ನುವುದು ಬಿಟ್ಟರೆ ಅಂದಿನಿಂದ ಪ್ರತಿವರ್ಷ ಮೊಟ್ಟೆ ಇಟ್ಟರೂ ವಿವಿಧ ಕಾರಣಗಳಿಗಾಗಿ ಮರಿ ಆಗುವುದರಲ್ಲಿ ವಿಫಲವಾಗಿತ್ತು. ಸತತ 5 ವರ್ಷಗಳ ನಂತರ ಕಳೆದ ಸಾಲಿನಲ್ಲಿ ಒಂದು ಜೋಡಿ ಮರಿಗೆ ಜನ್ಮ ನೀಡಿತ್ತು. ಇದಾದ ನಂತರ ಈ ವರ್ಷವು ಸಹ ಮೊಟ್ಟೆ ಮರಿ ಆಗುವುದರಲ್ಲಿ ಸಫಲವಾಗಿದೆ.

ಸುರಕ್ಷತೆಗೆ ಕ್ರಮ: ಪ್ರತಿದಿನ ಆಹಾರ ಹುಡುಕುತ್ತಾ ನೂರಾರು ಕಿಮೀ ಹಾರುವ ಸಾಮರ್ಥ್ಯವನ್ನು ರಣಹದ್ದುಗಳು ಹೊಂದಿವೆ. ಆದರೂ ಈ ಬಾರಿ ಅಪರೂಪಕ್ಕೆ ಎಂಬಂತೆ ಮರಿ ಆಗಿರುವುದರಿಂದ ಇದನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸ್ಥಳೀಯವಾಗಿಯೇ ರಣಹದ್ದುಗಳಿಗೆ ಆಹಾರ ದೊರೆಯುವಂತೆ ಮಾಡಲು ವೈದ್ಯರಿಂದ ಅನುಮತಿ ಪಡೆದ ಮಾಂಸವನ್ನು ಸ್ಥಳದಲ್ಲಿಯೇ ಒದಗಿಸಲು ಅರಣ್ಯ ಇಲಾಖೆ ಅಧಿಕಾರಿಗಳು ಚಿಂತಿಸಿದ್ದಾರೆ. ಅಲ್ಲದೆ, ನೀರು ಸಹ ಸ್ಥಳೀಯವಾಗಿಯೇ ದೊರೆಯುವಂತೆ ಮಾಡಲು ಇದ್ದ ನೀರಿನ ಹೊಂಡವನ್ನು ಶುಚಿಗೊಳಿಸುವ ಕೆಲಸವನ್ನು ಅರಣ್ಯ ಇಲಾಖೆ ಮಾಡಿದೆ.

> ಬಿಹಳ ವರ್ಷಗಳ ನಂತರ ಅಳಿವಿನಂಚಿನಲ್ಲಿರುವ ರಣಹದ್ದು ಮರಿ ಮಾಡಿರುವುದು ಸಂತಸದ ವಿಚಾರ. ಮರಿ ಸುರಕ್ಷಿತವಾಗಿದೆ. ಇದರ ರಕ್ಷಣೆಗೆ ಮಾನವ ಸಂಪರ್ಕ ವಾಗದಂತೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಸ್ಥಳೀಯ ವಾಗಿಯೇ ಆಹಾರ ದೊರೆಯುವಂತೆ ಮಾಡಲು ಚಿಂತಿಸಲಾಗಿದೆ.
> | ದೇವರಾಜು ಡಿಸಿಎಫ್, ಪ್ರಾದೇಶಿಕ ವಿಭಾಗ, ರಾಮನಗರ

Vijayavani Pg- 10

VijayaKarnataka Pg- 4

ಕರಿ ಈಶಾಡ ಹಣ್ಣಿಗೆ ವಿಶ್ವಮಾನ್ಯತೆ

■ **ನಾಗರಾಜ ಮಂಜಗುಣಿ** ಅಂಕೋಲಾ(ಉತ್ತರಕನ್ನಡ)
nmanjaguni@gmail.com

ಸ್ವಾದಿಷ್ಟ ರುಚಿ ಮತ್ತು ವಿಶೇಷ ಗುಣಲಕ್ಷಣಗಳ ಅಂಕೋಲಾ ಕರಿ ಈಶಾಡ ಮಾವಿನ ಹಣ್ಣು ಈಗ ಜಿಐ ಟ್ಯಾಗ್ (ಜಿಯೋಗ್ರಾಫಿಕಲ್ ಇಂಡಿಕೇಶನ್) ಮಾನ್ಯತೆಯನ್ನು ಪಡೆದಿದೆ. ಆ ಮೂಲಕ ಅಧಿಕೃತ ವಿಶ್ವಮಾನ್ಯತೆ ಪಡೆದಿದೆ.

ಭೌಗೋಳಿಕ ವಿಶೇಷವನ್ನು ಪರಿಗಣಿಸಿ ಜಿಐ ಟ್ಯಾಗ್ ನೀಡಲಾಗುತ್ತದೆ. ಮಾತಾ ತೋಟಗಾರ್ಸ್ ಫಾರ್ಮರ್ ಪ್ರೊಡ್ಯೂಸರ್ ಕಂಪನಿ 2022ರಲ್ಲಿ ಜಿಐ ಮಾನ್ಯತೆಗೆ ಅರ್ಜಿ ಸಲ್ಲಿಸಿತ್ತು. ಸಮೀಕ್ಷೆ ಕೂಡ ನಡೆಸಿ ಅಂಕೋಲಾದಲ್ಲಿ ಮಾತ್ರ ಈ ಹಣ್ಣು ಬೆಳೆಯುವ ಬಗ್ಗೆ ದಾಖಲೆಗಳನ್ನು ನೀಡಲಾಗಿತ್ತು. ಸತತ ಪ್ರಯತ್ನದ ಫಲವಾಗಿ ಕೊನೆಗೂ ಏ.2 ರಂದು ಜಿಐ ಪ್ರಮಾಣ ಪತ್ರ ದೊರೆತಿದೆ.

''ಅಂಕೋಲಾ ಕರಿ ಈಶಾಡ ಮಾವಿನ ಹಣ್ಣು ಕುರಿತು ಮತ್ತು ಅದರ ಉತ್ಪನ್ನಗಳ ಕುರಿತು ಚೆನ್ನೈನಲ್ಲಿ ಪ್ರಾತ್ಯಕ್ಷಿಕೆ ನೀಡಿದ್ದೆವು. ನಬಾರ್ಡ್ ಅಧಿಕಾರಿ ರೇಶಿಸರವರು ಮುತುವರ್ಜಿ ವಹಿಸಿದ್ದರಿಂದ ಜಿಐ ಪ್ರಮಾಣ ಪತ್ರ ಸಿಕ್ಕಿದೆ,'' ಎಂದು ಅಂಕೋಲಾದ ಮಾತಾ ತೋಟಗಾರ್ಸ್ ಫಾರ್ಮರ್ ಪ್ರೊಡ್ಯೂಸರ್ ಕಂಪನಿಯ ನಿರ್ದೇಶಕ ಮಾದೇವ ಗೌಡ ಹೇಳಿದ್ದಾರೆ.

ಅಂಕೋಲಾದ ಮಾವಿನ ಹಣ್ಣಿಗೆ ಜಿಐ ಟ್ಯಾಗ್



ಅಂಕೋಲಾದ ಕರಿ ಈಶಾಡ ಮಾವಿನ ಹಣ್ಣು

ಅಂಕೋಲಾ ತಾಲೂಕಿನ 49, ಕಾರವಾರದ 3, ಕುಮಟಾದ 12 ಹಳ್ಳಿಗಳಲ್ಲಿ ಕರಿ ಈಶಾಡ ಬೆಳೆಯಲಾಗುತ್ತಿದೆ. ಈ ಹಣ್ಣು ರುಚಿಕರ ಹಾಗೂ ವಿಶೇಷ ಗುಣಗಳಿಂದ ಕೂಡಿದೆ. ಈ ಮಾನ್ಯತೆಯ ಮಾಹಿತಿ ಪ್ರಧಾನಿ ಕಚೇರಿಯಿಂದ ವಿವಿಧ ರಾಷ್ಟ್ರಗಳಿಗೆ ತಲುಪಲಿದೆ. ಹೀಗಾಗಿ ಈ ಮಾವಿನ ಹಣ್ಣಿಗೆ ವಿಶ್ವ ಮಟ್ಟದಲ್ಲಿ ಬೇಡಿಕೆ ಹೆಚ್ಚಾಗಲಿದೆ ಎಂಬ ಆಶಾಭಾವ ಮೂಡಿದೆ.

ಏನಿದು ಜಿಐ ಟ್ಯಾಗ್?

ಗುಣಮಟ್ಟದ ಉತ್ಪನ್ನಗಳನ್ನು ಗುರುತಿಸುವ ಸಲುವಾಗಿ ವಿಶ್ವ ವ್ಯಾಪಾರ ಸಂಸ್ಥೆಯಡಿ ಜಿಐ ಟ್ಯಾಗ್ ವ್ಯವಸ್ಥೆಯನ್ನು 2003ರಲ್ಲಿ ಜಾರಿಗೆ ತರಲಾಗಿದೆ. ಇದರಲ್ಲಿ ನೋಂದಣಿಯಾದ ಉತ್ಪನ್ನ ಯಾವ ಭೌಗೋಳಿಕ ಪ್ರದೇಶದಲ್ಲಿ ಬೆಳೆಯಲಾಗುತ್ತದೆ ಎಂಬ ವಿವರ ಜತೆಗೆ ಅದರ ಗುಣಮಟ್ಟ, ವಿಶೇಷತೆಗಳನ್ನು ನಮೂದಿಸಲಾಗುತ್ತದೆ. ನಿರ್ದಿಷ್ಟ ಕಂಪನಿಗೆ ಮಾನ್ಯತೆ ನೀಡಿ ಇತರರು ಇಂತಹ ಪ್ರಸಿದ್ಧ ಉತ್ಪನ್ನಗಳ ಹೆಸರನ್ನು ಬಳಸುವುದನ್ನು ನಿರ್ಬಂಧಿಸುತ್ತದೆ.

326 ಉತ್ಪನ್ನಕ್ಕೆ ಮಾನ್ಯತೆ

ಇದುವರೆಗೆ ಭಾರತದಲ್ಲಿ 326ಕ್ಕೂ ಹೆಚ್ಚು ಉತ್ಪನ್ನಗಳಿಗೆ ಜಿಐ ಟ್ಯಾಗ್ ಮಾನ್ಯತೆ ಸಿಕ್ಕಿದೆ. ಇವುಗಳಲ್ಲಿ 40ಕ್ಕೂ ಹೆಚ್ಚು ಉತ್ಪನ್ನ ಕರ್ನಾಟಕದ್ದು. ಈಗ ಈ ಸಾಲಿಗೆ ಅಂಕೋಲಾ ಕರಿ ಈಶಾಡ ಮಾವಿನ ಹಣ್ಣು ಸೇರಿದೆ ಎನ್ನುವುದು ಹೆಮ್ಮೆಯ ಸಂಗತಿ.

ಸಂಯುಕ್ತ ಕರ್ನಾಟಕ ಬುಧವಾರ, 5 ಏಪ್ರಿಲ್ 2023 05

ಕೃಷಿ ವಾಣಿಜ್ಯ

skeditorkv@gmail.com

ಕಡಿಮೆ ಖರ್ಚು ಡಬಲ್ ಆದಾಯ

ಏಡಿ ಕೃಷಿ ಕಮಾಲ್



▪ ಶಿವು ಹಳ್ಯಾಳ

ಕುರಿ ಸಾಕಾಣಿಕೆ, ಮೇಕೆ ಸಾಕಾಣಿಕೆ, ಮೀನು ಸಾಕಣೆ ಬಗ್ಗೆ ನಾವು ಈಗಾಗಲೇ ಕೇಳಿದ್ದೇವೆ. ಅದರಲ್ಲಿಯೇ ಲಕ್ಷಾಂತರ ರೂಪಾಯಿ ಆದಾಯ ಗಳಿಸಿರುವುದನ್ನು ಕಂಡಿದ್ದೇವೆ. ಆದರೆ ಕಲಘಟಗಿ ತಾಲೂಕಿನ ದುಮ್ಮವಾಡ ಗ್ರಾಮದಲ್ಲಿ ಸಚಿನ್ ಬೂಸದ ಎಂಬುವರು ಏಡಿ ಸಾಕಾಣಿಕೆ ಕೃಷಿ ಮಾಡುವ ಮೂಲಕ ಗಮನ ಸೆಳೆದಿದ್ದಾರೆ.

ಮೀನು, ಕೋಳಿ, ಹೈನುಗಾರಿಕೆ ಅಂತಹ ಉಪ ಕೃಷಿಗಳಿಗೆ ಹೆಚ್ಚಿನ ಬಂಡವಾಳದ ಅಗತ್ಯವಿದೆ. ಏಡಿ ಕೃಷಿಗೆ ಹೇಳಿಕೊಳ್ಳುವ ಬಂಡವಾಳ ಬೇಕಿಲ್ಲ. ಕಡಿಮೆ ಜಾಗದಲ್ಲಿ, ಕಡಿಮೆ ಬಂಡವಾಳ ಹಾಕಿ, ಹೆಚ್ಚಿನ ಆದಾಯ ತರುವ ಏಡಿಗಳನ್ನು ಸಾಕುವ ಮೂಲಕ ರೈತರು ಆದಾಯ ದ್ವಿಗುಣಗೊಳಿಸಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ ಸಚಿನ್.

ಕಲಘಟಗಿ ತಾಲೂಕಿನ ದುಮ್ಮವಾಡ ಗ್ರಾಮದ ಪ್ರಗತಿಪರ ರೈತ ನಾಗಪ್ಪ ಉದ್ದನ್ನವರ ಎಂಬುವರ ದುಮ್ಮವಾಡ-ಜಮ್ಮಿಹಾಳ ಮಧ್ಯದ ಜಮೀನಿನಲ್ಲಿ ಸಚಿನ್ ಭೂಸದ ಕಳೆದ ಆರು ತಿಂಗಳಿಂದ ಏಡಿ ಕೃಷಿ ಕೈಗೊಂಡಿದ್ದಾರೆ. ಮಹಾರಾಷ್ಟ್ರದ ಲಾತೂರಿನಲ್ಲಿ ಏಡಿ ಸಾಕಾಣಿಕೆ ಮಾಡುವ ಕುರಿತು ತರಬೇತಿ ಪಡೆದಿರುವ ಸಚಿನ್, ಹೊಲದ ಒಂದು ಭಾಗದಲ್ಲಿ 65*65 ಜಾಗದಲ್ಲಿ ಒಂದು ಕೊಳ ಸೃಷ್ಟಿ ಮಾಡಿ ಏಡಿ ಸಾಕಾಣಿಕೆಯಲ್ಲಿ ತೊಡಗಿದ್ದಾರೆ.

ಆರು ತಿಂಗಳ ಹಿಂದೆ ರಾಕ್ ಮಡ್ ಜಾತಿಯ 1500 ಶೇ.60 ಗಂಡು, ಶೇ.40 ಹೆಣ್ಣು ಏಡಿಗಳನ್ನು ತಂದು ಸಾಕಾಣಿಕೆಯಲ್ಲಿ ತೊಡಗಿದ್ದರು. ಈಗ ಏಡಿಗಳು ಸಂತಾನೋತ್ಪತ್ತಿ ಮಾಡುತ್ತಿದ್ದು, ಅವುಗಳ ಸಂಖ್ಯೆ 2000ಕ್ಕೂ ಹೆಚ್ಚಾಗಿದೆ. ಎರಡುವರೆ ವರ್ಷ ಜೀವಿತಾವಧಿಯ ಒಂದು ಏಡಿ ವರ್ಷಕ್ಕೆ 100 ರಿಂದ 150 ಮರಿಗಳನ್ನು ಹಾಕುತ್ತದೆ. ಈ ಪೈಕಿ ವಿವಿಧ ಕಾರಣಗಳಿಂದ 25 ರಿಂದ 30 ಏಡಿಗಳು ಮಾತ್ರ ಬದುಕುತ್ತವೆ. ಒಂದು ಏಡಿ ಅಂದಾಜು 200 ಗ್ರಾಂವರೆಗೂ ತೂಗುತ್ತಿದ್ದು, ಹೋಟೆಲ್ ಹಾಗೂ ಮಾರುಕಟ್ಟೆಯಲ್ಲಿ ಒಂದು ಕೆ.ಜಿ. ಏಡಿಗೆ 400 ರಿಂದ 500 ರೂ.ವರೆಗಿನ ದರದಲ್ಲಿ ಮಾರಾಟ ಆಗುತ್ತಿವೆ ಎಂದು ಮಾಹಿತಿ ನೀಡಿದರು.

ಏಡಿಯಲ್ಲಿ ಮನುಷ್ಯನ ದೇಹಕ್ಕೆ ಬೇಕಾದ ವಿಟಮನ್, ಮಿನರಲ್ಸ್, ಓಮೆಗಾ-3 ಇರುತ್ತದೆ. ಆರೋಗ್ಯದ ದೃಷ್ಟಿಯಿಂದ ಉತ್ತಮ. ಈ ಹಿನ್ನೆಲೆಯಲ್ಲಿ ಅವಳಿ ನಗರದ ಹೋಟೆಲ್‌ಗಳು ಹಾಗೂ ಮಾರುಕಟ್ಟೆಯಲ್ಲಿ ಏಡಿಗೆ ತುಂಬ ಬೇಡಿಕೆ ಇದೆ. ಬೇರೆ ಬೇರೆ ಬೆಳೆಗಳ ಮಧ್ಯೆ ಏಡಿ ಸಾಕಾಣಿಕೆ ಲಾಭ ತರುವಲ್ಲಿ ಸಂಶಯವೇ ಇಲ್ಲ. ನೈಸರ್ಗಿಕವಾಗಿ ನದಿ, ಹಳ್ಳ-ಕೊಳ್ಳದ ರೀತಿಯಲ್ಲಿ ಏಡಿಗಳಿಗೆ ಪರಿಸರ ರಚಿಸಿಕೊಟ್ಟರೆ ಉತ್ತಮವಾಗಿ ಏಡಿ ಕೃಷಿ ಮಾಡಬಹುದು ಎನ್ನುತ್ತಾರೆ ಸಚಿನ್ ಬೂಸದ.

ಎರಡುವರೆ ಲಕ್ಷ ವೆಚ್ಚದಲ್ಲಿ ಏಡಿ ಕೃಷಿ ಆರಂಭ ಮಾಡಿದ್ದೇನೆ. ಮೂರು ತಿಂಗಳಿಗೊಮ್ಮೆ ಏಡಿಗಳ ಮಾರಾಟ ಮಾಡುತ್ತಿದ್ದು, ಒಂದು ವರ್ಷದ ನಂತರ ಲಾಭದ ಬಗ್ಗೆ ಸಂಪೂರ್ಣ ಮಾಹಿತಿ ಸಿಗುತ್ತದೆ. ಹುಬ್ಬಳ್ಳಿ-ಧಾರವಾಡ ಮಾತ್ರವಲ್ಲದೇ ಮಹಾರಾಷ್ಟ್ರ, ಬೆಳಗಾವಿ, ಉತ್ತರ ಕನ್ನಡದಲ್ಲಿ ಏಡಿಗಳಿಗೆ ಹೆಚ್ಚಿನ ಬೇಡಿಕೆ ಇದೆ. ನಮ್ಮ ಭಾಗದಲ್ಲಿ ವಿನೂತನ ಎನ್ನಿಸಿಕೊಂಡಿರುವ ಏಡಿ ಕೃಷಿಯನ್ನು ಈಗಾಗಲೇ ಸುತ್ತಲಿನ ರೈತರು ವೀಕ್ಷಣೆ ಮಾಡಿ ಹೋಗಿದ್ದಾರೆ. ಕೃಷಿ ಇಲಾಖೆ ಅಧಿಕಾರಿಗಳು ಸಹ ಏಡಿ ಕೃಷಿ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ ಎನ್ನುತ್ತಾರೆ.

> ಈಗಾಗಲೇ ಕೃಷಿ ಹೊಂಡ ನಿರ್ಮಿಸಿಕೊಂಡಿರುವ ರೈತರಿಗೆ ನರೇಗಾದಲ್ಲಿ ಅನೇಕ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಏಡಿ ಕೃಷಿ ಕೈಗೊಂಡಿರುವ ಸಚಿನ್ ಬೂಸದ ಅವರು ಯಶಸ್ವಿಯಾದಲ್ಲಿ, ಸಮಗ್ರ ಕೃಷಿ ನೀತಿಯಲ್ಲಿ ಏಡಿ ಕೃಷಿಯನ್ನು ಅಳವಡಿಸಲು ಸರ್ಕಾರಕ್ಕೆ ಪತ್ರ ಬರೆಯಲಾಗುತ್ತದೆ.
>
> ▪ಡಾ. ಸುರೇಶ ಇಟ್ನಾಳ, ಜಿಲ್ಲಾ ಪಂಚಾಯ್ತಿ ಸಿಇಒ.



ಕೊಳದಲ್ಲಿರುವ ರಾಕ್ ಮಡ್ ಜಾತಿಯ ಏಡಿ.

ದುಮ್ಮವಾಡ ಗ್ರಾಮದಲ್ಲಿ ಸಚಿನ್ ಬೂಸದ ಎಂಬುವವರು ಏಡಿ ಸಾಕಾಣಿಕೆ ಕೃಷಿಗಾಗಿ ನಿರ್ಮಿಸಿರುವ ಕೊಳ.



ನಮ್ಮ ಭಾಗದಲ್ಲಿ ಸಾಕಷ್ಟು ಕೃಷಿ ಹೊಂಡಗಳು ಖಾಲಿ ಇವೆ ಅವುಗಳಲ್ಲಿ ಏಡಿ ಕೃಷಿ ಮಾಡುವ ಬಗ್ಗೆ ರೈತರಿಗೆ ತರಬೇತಿ ನೀಡುವ ಉದ್ದೇಶವನ್ನು ನಾನು ಹೊಂದಿದ್ದೇನೆ. ಏಡಿ ಕೃಷಿ ಮಾಡಲು ಹಲವು ರೈತರು ಉತ್ಸುಕರಾಗಿದ್ದು, ತರಬೇತಿ ನೀಡಲಾಗುತ್ತದೆ.

▪ಸಚಿನ್ ಬೂಸದ | ಏಡಿ ಕೃಷಿ ಮಾಡುತ್ತಿರುವ ರೈತ.



33 ಉತ್ಪನ್ನಗಳಿಗೆ ಭೌಗೋಳಿಕ ಹೆಗ್ಗುರುತು | ಬನಾರಸಿ ಪಾನ್, ಲಂಗ್ಡಾ ಮಾವಿಗೂ ಮಾನ್ಯತೆ

ಅಂಕೋಲಾದ ಕರಿ ಈಶಾಡು ಮಾವಿಗೆ ಜಿಐ ಗರಿ

■ ವಿಜಯವಾಣಿ ಸುದ್ದಿಜಾಲ ಕಾರವಾರ

ಅಂಕೋಲಾದ ಪ್ರಸಿದ್ಧ ಕರಿ ಈಶಾಡು ಮಾವಿಗೆ ಜಿಐ ಟ್ಯಾಗ್ (ಭೌಗೋಳಿಕ ಗುರುತು) ಲಭ್ಯವಾಗಿದೆ. ಅಂಕೋಲಾದ ಮಾತಾ ತೋಟಗಾರ್ಸ್ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಿ ಕೇಂದ್ರ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಂಟ್ರೋಲರ್ ಜನರಲ್ ಆಫ್ ಪೇಟೆಂಟ್ಸ್, ಡಿಸೈನ್ಸ್ ಮತ್ತು ಟ್ರೇಡ್ ಮಾರ್ಕ್ಸ್ ಸಂಸ್ಥೆ ಅಧಿಕೃತ ವೆಬ್‌ಸೈಟ್‌ನಲ್ಲಿ ಇದನ್ನು ಪ್ರಕಟಿಸಿದೆ. ಇದರ ಜತೆಗೆ, ಬನಾರಸಿ ಪಾನ್ ಸೇರಿ 33 ಉತ್ಪನ್ನಗಳಿಗೆ ಜಿಐ ಟ್ಯಾಗ್ ದಕ್ಕಿದೆ.

ಜಿಐ ಮಹತ್ವ

ಒಂದು ನಿರ್ದಿಷ್ಟ ಸ್ಥಳಕ್ಕೆ ಸೀಮಿತವಾಗಿದ್ದು ಜನಪ್ರಿಯವಾಗಿರುವ ಉತ್ಪನ್ನಗಳಿಗೆ ಜಿಐ ಮಾನ್ಯತೆ ನೀಡಲಾಗುತ್ತದೆ. ಜಿಐ ಎನ್ನುವುದು ಅದನ್ನು ಸೂಚಿಸುವ ಚಿಹ್ನೆಯಾಗಿದೆ. ಆ ನಿರ್ದಿಷ್ಟ ಸ್ಥಳದ ಉತ್ಪನ್ನವಾಗಿರುವ ಕಾರಣ ಅದರ ಗುಣ ಮತ್ತು ಪ್ರಖ್ಯಾತಿಯು ಅದಕ್ಕೆ ವಿಶೇಷ ಸ್ಥಾನವನ್ನು ಒದಗಿಸುತ್ತದೆ.

ಅಂಕೋಲಾದಲ್ಲಿ ಮಾತ್ರ ಸುಮಾರು 60 ರಿಂದ 70 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುವ ಕರಿ ಈಶಾಡ ಮಾವು ತುಂಬ ರುಚಿಕರ. ಇದಕ್ಕೆ ಶತಮಾನಗಳ ಇತಿಹಾಸವಿದೆ. ಇದನ್ನು ಬ್ರಿಟನ್‌ಗೆ ಕೊಂಡೊಯ್ದ ದಾಖಲೆಗಳಿವೆ. 1908 ರಲ್ಲಿ ಕರಿ ಈಶಾಡಿನ ಮೌಲ್ಯವರ್ಧನೆಗೆ ಕೆನರೀಸ್ ಇಂಡಸ್ಟ್ರೀಸ್ ಆರಂಭವಾಗಿತ್ತು. ಅಮೇರಿಕದ ಊಟದ ತಟ್ಟೆಯಲ್ಲಿ, ಆಸ್ಟ್ರೇಲಿಯಾದ ಐಸ್‌ಕ್ರೀಮ್‌ನಲ್ಲಿ ಇದನ್ನು ಬಳಸಲಾಯಿತು. ಬೈಫ್ ಸಂಸ್ಥೆ, ತೋಟಗಾರಿಕೆ ಬೆಳೆ ವಿಸ್ತೀರ್ಣ ಹಾಗೂ ಇತರ ಕೆಲವು ಮಾಹಿತಿಗಳನ್ನು ಸಂಗ್ರಹಿಸಿ ಒದಗಿಸಿದ್ದವು. ನಬಾರ್ಡ್ ಈ ಎಲ್ಲ ಪ್ರಕ್ರಿಯೆಗಳಿಗೆ ಆರ್ಥಿಕ ಸಹಕಾರ ನೀಡಿತ್ತು. ಇವೆಲ್ಲವನ್ನೂ ಪಡೆದು 2022ರ ಮಾರ್ಚ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲಾಗಿತ್ತು.



ಒಂದು ಜಿಲ್ಲೆ ಒಂದು ಉತ್ಪನ್ನ

ಒಂದು ಜಿಲ್ಲೆ ಒಂದು ಉತ್ಪನ್ನ (ಒಡಿಒಪಿ) ಯೋಜನೆಯಡಿ ಉತ್ತರ ಪ್ರದೇಶ ಸರ್ಕಾರ ಈ ವಲಯದ ಬನಾರಸ್ ಸೀರೆ ಮತ್ತು ಲೋಹದ ಕರಕುಶಲ ವಸ್ತುಗಳಂಥ ವಿಶೇಷ ಉತ್ಪನ್ನಗಳಿಗೆ ಉತ್ತೇಜನ ನೀಡಲು ಹಾಗೂ ಜಿಐ ಮಾನ್ಯತೆ ದೊರಕಿಸಲು ಪ್ರಯತ್ನಿಸುತ್ತಿದೆ. ಬನಾರಸಿ ಬ್ರೊಕೇಡ್ ಮತ್ತು ಬನಾರಸಿ ಸೀರೆ, ಮರದ ಆಟಿಕೆಗಳು, ಮೃದು ಕಲ್ಲಿನ ಜಾಲಿ ಕ್ರಾಫ್ಟ್, ಗುಲಾಬಿ ಮೀನಾಕರಿ ಸಹಿತ ಹಲವು ವಸ್ತುಗಳಿಗೆ ಈಗಾಗಲೇ ಜಿಐ ಟ್ಯಾಗ್ ಸಿಕ್ಕಿದೆ. ಪ್ರಧಾನಿ ನರೇಂದ್ರ ಮೋದಿ ಲೋಕಸಭೆಯಲ್ಲಿ ವಾರಾಣಸಿ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದು, ಸ್ಥಳೀಯ ಉತ್ಪನ್ನಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆ ಒದಗಿಸಲು ಹೆಚ್ಚಿನ ಒತ್ತು ನೀಡುತ್ತಿದ್ದಾರೆ.

ಜಿಐ ಜರ್ನಲ್‌ನಲ್ಲಿ ಇದನ್ನು ಪ್ರಕಟಿಸಿ ನಂತರ ಇದೇ ಮಾರ್ಚ್ 31 ರಂದು ಮುಂದಿನ 10 ವರ್ಷಗಳಿಗೆ ಎಂದರೆ 2032 ರವರೆಗೆ ಜಿಯಾಗ್ರಫಿಕಲ್ ಸರ್ಟಿಫಿಕೇಶನ್ ನೀಡಿ ಆದೇಶ ಹೊರಡಿಸಲಾಗಿದೆ. ಪ್ರಖ್ಯಾತವಾದ ಬನಾರಸಿ ಪಾನ್ (ವೀಳ್ಯದೆಲೆ) ಮತ್ತು ಬನಾರಸಿ ಲಂಗ್ಡಾ ಮಾವು ಸೇರಿ 33 ಉತ್ಪನ್ನಗಳು ಜಿಐ ಇಂಡಿಕೇಟರ್ ಪಟ್ಟಿಯಲ್ಲಿ ಹೊಸದಾಗಿ ಸೇರಿವೆ. ಚೆನ್ನೈನ ಜಿಐ ನೋಂದಣಿ ಕಚೇರಿ (ರಿಜಿಸ್ಟ್ರಿ) ಮಾರ್ಚ್ 31ರಂದು ಜಿಐ ಪ್ರಮಾಣಪತ್ರ ನೀಡಿದೆ. ಹೊಸದಾಗಿ ಜಿಐ ಸರ್ಟಿಫಿಕೆಟ್ ಪಡೆದ ಉತ್ಪನ್ನಗಳಲ್ಲಿ ವಾರಾಣಸಿಯ ಎರಡು ಉತ್ಪನ್ನಗಳ ಸಹಿತ ಉತ್ತರ ಪ್ರದೇಶದ 10 ಉತ್ಪನ್ನಗಳು ಸೇರಿವೆ.

ಡಾರ್ಜಿಲಿಂಗ್ ಚಹಾ ಮೊದಲ ಜಿಐ: 2003ರಲ್ಲಿ ಜಿಐ ಮಾನ್ಯತೆ ಆರಂಭಿಸಲಾಗಿದ್ದು ಡಾರ್ಜಿಲಿಂಗ್ ಟೀ ಅದನ್ನು ಪಡೆದ ಪ್ರಪ್ರಥಮ ಉತ್ಪನ್ನವಾಗಿದೆ.